## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕರ ಒಂದು ಹುದ್ದೆಯನ್ನು ನಿರ್ದೇಶಕರ ಹುದ್ದೆಯೆಂದು ಉನ್ನತೀಕರಿಸುವ ಬಗ್ಗೆ – ಆದೇಶ.

ಓದಲಾಗಿದೆ: 1. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರದ ಸಂಖ್ಯೆ: ಕೈವಾಇ/ಆಡಳಿತ/ಸಿಬ್ಬಂದಿ/ಅಧೀ/76/2022-23, ದಿನಾಂಕ: 20.09.2023.

2. ಸಿಆಸು ಇಲಾಖೆಯ ಸುತ್ತೋಲೆ ಸಂ.:ಸಿಆಸುಇ 17 ಸೇನಿಡಿ 2020, ದಿನಾಂಕ: 06.07.2020.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಬೆಂಗಳೂರು ಇವರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಪ್ರಸ್ತುತ ಕರ್ತವ್ಯ ನಿರತ ಅಪರ ನಿರ್ದೇಶಕರುಗಳು (KCSR Appendix-1 Rule8 (21) ರಂತೆ ಇಲಾಖಾ ಮುಖ್ಯಸ್ಥರಾಗಿದ್ದು 2018ರ ಪರಿಷ್ಕೃತ ವೇತನ ಶ್ರೇಣಿಯ ಕ್ರಮ ಸಂಖ್ಯೆ: 23 ರಲ್ಲಿರುವ ವೇತನ ಶ್ರೇಣಿ ರೂ.90,500-1,23,300 ನಿಗದಿಯಾಗಿರುತ್ತದೆ. ಸದರಿ ವೃಂದದಲ್ಲಿ 4-ಎನ್ ಕೇಡರ್ ಹುದ್ದೆಗಳು ಇಲಾಖೆಯಲ್ಲಿದ್ದು, 14 ಎಕ್ಸ್-ಕೇಡರ್ ಹುದ್ದೆಗಳು ಸೇರಿ ಒಟ್ಟು 18 ಮಂಜೂರಾದ ಹುದ್ದೆಗಳಿರುತ್ತದೆ. ಸದರಿ ವೃಂದದಡಿ ಹಾಲಿ ಕಾರ್ಯನಿರ್ವಹಿಸುತ್ತಿರುವ 15 ಅಪರ ನಿರ್ದೇಶಕರುಗಳು ಈಗಾಗಲೇ 29 ವರ್ಷಗಳ ಸೇವಾವಧಿಯನ್ನು ಪೂರೈಸಿದ್ದು, ಸದರಿಯವರುಗಳಿಗೆ ಪ್ರಸ್ತುತ 6-8 ವರ್ಷಗಳ ಸೇವಾವಧಿ ಬಾಕಿ ಇರುತ್ತದೆ. ಇವರುಗಳು ಈಗಾಗಲೇ 6 ಸ್ಥಗಿತ ವೇತನ ಬಡ್ತಿಗಳನ್ನು ಪಡೆದಿರುತ್ತಾರೆ. ಇವರ ಸೇವಾವಧಿಯಲ್ಲಿ ಒಟ್ಟು 8 ಸ್ಥಗಿತ ವೇತನ ಬಡ್ತಿಗಳನ್ನು ನೀಡಿದ್ದಾಗ್ಯೂ ಕಡೆಯ 4-5 ವರ್ಷಗಳ ಸೇವಾವಧಿಗೆ ಯಾವುದೇ ವೇತನ ಬಡ್ತಿ ಇಲ್ಲದಂತೆ ಕಾರ್ಯನಿರ್ವಹಿಸುವ ಸಂದರ್ಭ ಬಂದಿರುತ್ತದೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಇತರೆ ಇಲಾಖೆಗಳಲ್ಲಿ ಹಾಲಿ ಇರುವಂತೆ ವೇತನ ಶ್ರೇಣಿ ರೂ.1,04,600-1,50,600/- ರಲ್ಲಿ (2018ರ ಪರಿಷ್ಕೃತ ವೇತನ ಶ್ರೇಣಿಯ ಕ್ರಮ ಸಂಖ್ಯೆ: 25 ರ) 4 (ನಾಲ್ಕು) ನಿರ್ದೇಶಕರ ಹುದ್ದೆಗಳನ್ನು ಸೃಜಿಸುವುದು ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಅವಶ್ಯವಾಗಿರುತ್ತದೆ. ಇವುಗಳಿಂದ ಅಧಿಕಾರ ಕೇಂದ್ರೀಕರಣ ಮತ್ತು ಕಾರ್ಯವಿಧಾನ ಸರಳೀಕರಣಗೊಳಿಸಲು ಅನುಕೂಲವಾಗುತ್ತದೆ. ಆದುದರಿಂದ ಹೊಸದಾಗಿ ಸೃಜಿಸುವ 4(ನಾಲ್ಕು) ನಿರ್ದೇಶಕರ ಹುದ್ದೆಗಳಲ್ಲಿ ನಿರ್ದೇಶಕರು (ಎಂಎಸ್ಎಂಇ) ಕಿರಿಯ ಶ್ರೇಣಿ ಐ.ಎ.ಎಸ್ ಅಧಿಕಾರಿ ಎನ್-ಕೇಡರ್ ಆಗಿರುವ ಹುದ್ದೆಗೆ ಇಲಾಖೆಯಲ್ಲಿ ಹಾಲಿ ಇರುವ ಅಪರ ನಿರ್ದೇಶಕರು (MSME) ಹುದ್ದೆ ಉನ್ನತೀಕರಿಸಿ ಪರಿಗಣಿಸುವುದು. ಈ ಕೆಳಕಂಡ ನಿರ್ದೇಶಕರ ಹುದ್ದೆಗಳಿಗೆ ಕನಿಷ್ಠ 4 ವರ್ಷ ಸೇವೆ ಸಲ್ಲಿಸಿದ ಇಲಾಖೆಯ ಅಪರ ನಿರ್ದೇಶಕರನ್ನು ಜ್ಯೇಷ್ಠತೆ ಅನುಸಾರ ಮುಂಬಡ್ತಿಗೆ ಪರಿಗಣಿಸಬಹುದಾಗಿದೆ.

| | | | |
|---|---|---|---|
| 1 | ನಿರ್ದೇಶಕರು (MSME) | ನಿರ್ದೇಶನಾಲಯದಲ್ಲಿ | ಅಪರ ನಿರ್ದೇಶಕರು (MSME) ಹುದ್ದೆಯನ್ನು ಉನ್ನತೀಕರಿಸಿ, ಕಿರಿಯ ಶ್ರೇಣಿ ಐ.ಎ.ಎಸ್ ಗೆ ಎನ್-ಕೇಡರ್ ಹುದ್ದೆಗೆ ಬದಲಿಗೆ ನೀಡುವುದು. |

| | | | |
|---|---|---|---|
| 2 | ನಿರ್ದೇಶಕರು (ತಾಂತ್ರಿಕ ಕೋಶ) | ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ | ಎಕ್ಸ್-ಕೇಡರ್ ಹಾಲಿ ಹುದ್ದೆಯ ಉನ್ನತೀಕರಣ |
| 3 | ನಿರ್ದೇಶಕರು (ರಫ್ತು) | ವಿಶ್ವೇಶ್ವರಯ್ಯ ವ್ಯಾಪರ ಉತ್ತೇಜನಾ ಕೇಂದ್ರ | ಎಕ್ಸ್-ಕೇಡರ್ ಹಾಲಿ ಹುದ್ದೆಯ ಉನ್ನತೀಕರಣ |
| 4 | ನಿರ್ದೇಶಕರು (ಆಡಳಿತ) | ನಿರ್ದೇಶನಾಲಯದಲ್ಲಿ | ವೃಂದ ಹುದ್ದೆಯ ಉನ್ನತೀಕರಣ |

ಮೇಲಿನಂತೆ 4 (ನಾಲ್ಕು) ನಿರ್ದೇಶಕರು ಹುದ್ದೆಗಳ ಸೃಜನೆಯಿಂದ ಸರ್ಕಾರಕ್ಕೆ ಯಾವುದೇ ಗಣನೀಯ ಪ್ರಮಾಣದಲ್ಲಿ ಆರ್ಥಿಕ ಹೊರೆಯಾಗುವುದಿಲ್ಲ, ಬದಲಿಗೆ ಉನ್ನತ ಹುದ್ದೆಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳ ಅನುಭವವನ್ನು ಹಾಗೂ ಸೇವೆಯನ್ನು ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಸಮರ್ಪಕವಾಗಿ ಬಳಸಿಕೊಂಡಂತೆ ಆಗುತ್ತದೆ ಹಾಗೂ ಈ ಅಧಿಕಾರಿಗಳ ಸೇವೆ ಇರುವವರೆಗೆ ಹಿರಿಯ ವೇತನ ಶ್ರೇಣಿಯಲ್ಲಿ ವಾರ್ಷಿಕ ವೇತನ ಬಡ್ತಿಯನ್ನು ಪಡೆಯಲು ಅನುಕೂಲ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸುತ್ತೋಲೆಯಲ್ಲಿ "ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 3ರ ಉಪ-ನಿಯಮ (1) ಮತ್ತು (2)ನ್ನು ಸಂಯುಕ್ತವಾಗಿ ಓದಿಕೊಂಡಂತೆ, ಇವುಗಳನ್ವಯ ಇಲಾಖಾ ಮುಖ್ಯಸ್ಥರ ಹುದೆಗಳನ್ನು ಆಯ್ಕೆ ಮೂಲಕ ಮುಂಬಡ್ತಿ ನೀಡುವುದರ ಮುಖಾಂತರ ಮಾತ್ರ ಭರ್ತಿ ಮಾಡಬೇಕಾಗುತ್ತದೆ" ಎಂದು ಸೂಚಿಸಲಾಗಿದೆ.

ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯದ ಪ್ರಸ್ತಾವನೆಯನ್ನು ಕೂಲಕಂಷವಾಗಿ ಪರಿಶೀಲಿಸಿ, ನಿರ್ದೇಶಕರ ಹುದ್ದೆಗಳನ್ನು ಸೃಜಿಸುವುದು ಇಲಾಖೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಅವಶ್ಯವಾಗಿದ್ದು, ಇವುಗಳಿಂದ ಅಧಿಕಾರ ಕೇಂದ್ರೀಕರಣ ಮತ್ತು ಕಾರ್ಯವಿಧಾನ ಸರಳೀಕರಣಗೊಳಿಸಲು ಅನುಕೂಲವಾಗುವುದರಿಂದ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಪರ ನಿರ್ದೇಶಕರ ವೃಂದದಲ್ಲಿ ಮಂಜೂರಾದ ಒಟ್ಟು 18 ಹುದ್ದೆಗಳ ಪೈಕಿ ಇಲಾಖೆಯ 1 ಎಕ್ಸ್-ಕೇಡರ್ ಹುದ್ದೆಯನ್ನು ವೇತನ ಶ್ರೇಣಿ ರೂ.167200-4000-179200-4500-206200-5000-241200 ರಡಿ ನಿರ್ದೇಶಕರ ಹುದ್ದೆಯೆಂದು ಉನ್ನತೀಕರಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>**ಸರ್ಕಾರದ ಆದೇಶ ಸಂಖ್ಯೆ: ವಾಕೈ 140 ಕೈಸೇವಿ 2023, ಬೆಂಗಳೂರು ದಿನಾಂಕ:13.08.2025.**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ 18 ಅಪರ ನಿರ್ದೇಶಕರ ಹುದ್ದೆಗಳ (ವೇತನ ಶ್ರೇಣಿ ರೂ. ರೂ. 144700-3500-155200-4000-179200-4500-197200) ಪೈಕಿ 1 ಎಕ್ಸ್-ಕೇಡರ್ ಹುದ್ದೆಯಾದ ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ

ಹುದ್ದೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ವೇತನ ಶ್ರೇಣಿ ರೂ.167200-4000-179200-4500-206200-5000-241200 ರಡಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರ ಹುದ್ದೆಯೆಂದು ಉನ್ನತೀಕರಿಸಿ ಆದೇಶಿಸಿದೆ.

1. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡುವುದು.
2. ಕನಿಷ್ಠ 2 ವರ್ಷ ಅರ್ಹತಾದಾಯಕ ಸೇವೆ ಸಲ್ಲಿಸಿದ ಅಪರ ನಿರ್ದೇಶಕರ ವೃಂದದಿಂದ ಆಯ್ಕೆ ಮೂಲಕ ಮುಂಬಡ್ತಿ ಮುಖಾಂತರ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡುವುದು.
3. ಮೇಲಿನಂತೆ ಉನ್ನತೀಕರಿಸಿ ಸೃಜನೆಯ ನಂತರ ಅಪರ ನಿರ್ದೇಶಕರ ವೃಂದದಲ್ಲಿ ಉಳಿಯುವ ಇಲಾಖೆಯ ಒಟ್ಟು 17 ಹುದ್ದೆಗಳನ್ನು (4 ಎನ್-ಕೇಡರ್ ಹಾಗೂ 13 ಎಕ್ಸ್-ಕೇಡರ್) ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ನೇಮಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 89 ವೆಚ್ಚ-1/2023, ದಿನಾಂಕ: 16.07.2024 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಉಮಾದೇವಿ.ಕೆ 13/8
**(ಉಮಾದೇವಿ .ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ
(ಸೇವೆಗಳು ಮತ್ತು ಸಮನ್ವಯ)

**<u>ಇವರಿಗೆ:</u>**

ಸಂಕಲನಕಾರರು, ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

1. ಮಹಾಲೇಖಪಾಲರು, (ಎ ಮತ್ತು ಇ) / (ಲೆಕ್ಕಪತ್ರ) / (ಆಡಿಟ್ 1 & 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಕೈಗಾರಿಕಾಭಿವೃದ್ಧಿ ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49, ಖನಿಜ ಭವನ, ಡಿ.ದೇವರಾಜ್ ಅರಸ್ ರಸ್ತೆ, ಬೆಂಗಳೂರು.
4. ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ನಂ.49, ಖನಿಜ ಭವನ, ಡಿ.ದೇವರಾಜ್ ಅರಸ್ ರಸ್ತೆ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

--4

**ಪ್ರತಿಗಳು:**

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ (ಎಂಎಸ್ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧಿಕೃತ
ಅಂತರ್ಜಾಲತಾಣ www.industry.karnataka.gov.in ವೀಕ್ಷಿಸಿ